NOVEMBER 14, 2025

**AKASHAVANI - DHARWAD**

**PRADESH SAMACHARA (KANNADA) 12.00 P.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

ಇಂದು ವಿಶ್ವ ಮಧುಮೇಹ ದಿನ. ಮಧುಮೇಹ ತಡೆ, ನಿರ್ವಹಣೆ, ಜಾಗೃತಿ ನಿಟ್ಟಿನಲ್ಲಿ ಜಾತಗತಿಕ ಅರಿವು ಮೂಡಿಸಲಾಗುತ್ತಿದೆ. 'ಜೀವನದ ವಿವಿಧ ಹಂತಗಳಲ್ಲಿ ಮಧುಮೇಹ', ಎಂಬುದು ಈ ಬಾರಿಯ ಘೋಷವಾಕ್ಯವಾಗಿದೆ. ಇನ್ಸುಲಿನ್ ಕಂಡು ಹಿಡಿದ ಸರ್ ಫೆಡ್ರಿಕ್ ಬ್ಯಾಂಟಿಂಗ್ ಅವರ ಜನ್ಮದಿನದಂದು, ಮಧುಮೇಹದ ಬಗ್ಗೆ ಜನ ಜಾಗೃತಿ ಮೂಡಿಸುವ ಕಾರ್ಯಕ್ರಮಗಳು ಆಯೋಜಿತವಾಗಿವೆ. ಮಧುಮೇಹ ತಡೆ ಕ್ರಮಗಳ ಕುರಿತು ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಧಾರವಾಡದ, ಮಧುಮೇಹ ತಜ್ಞರಾದ ಡಾಕ್ಟರ ಸಂಧ್ಯಾ ಕುಲಕರ್ಣಿ

<><><>

ಡಾಕ್ಟರ ಸಂಧ್ಯಾ ಕುಲಕರ್ಣಿ 44 ಸೆಕೆಂದುಗಳು

<><><>

ಕೇಂದ್ರ ಸರ್ಕಾರದ ಆಯು ೕ ಸಚಿವಾಲಯದಿಂದ, ಮಧುಮೇಹ ಮೆಲ್ಲಿಟಸ್ ನಲ್ಲಿ ಮಾನ್ಯತೆ ಪಡೆದ, ಶ್ರೇ ್ತಾ ಕೇಂದ್ರ, ಬೆಂಗಳೂರಿನ ಕೇಂದ್ರ ಆಯುರ್ವೇದ ಸಂಶೋಧನಾ ಸಂಸ್ಥೆ, ಇಂದು ವಿಶ್ವ ಮಧುಮೇಹ ದಿನದ ಅಂಗವಾಗಿ, 'ಮಧುಮೇಹ ವಿಮರ್ಶ' ಕಾರ್ಯಕ್ರಮ ಆಯೋಜಿಸಿದೆ. 'ಮಧುಮೇಹದ ಸಮಗ್ರ ನಿರ್ವಹಣೆ', ಕುರಿತು ರಾಮಯ್ಯ ಇಂಡಿಕ್ ಸ್ಪೆ ಾಲಿಟಿ, ಆಯುರ್ವೇದ ಪುನಃಸ್ಥಾಪನಾ ಆಸ್ಪತ್ರೆ, ಮಾಜಿ ನಿರ್ದೇಶಕ, ಡಾಕ್ಟರ ಜಿ.ಜಿ. ಗಂಗಾಧರನ್ ಅವರು ವಿಶೇಷ ಉಪನ್ಯಾಸ ನೀಡಲಿದ್ದಾರೆ.

<><><>

ಕರ್ನಾಟಕ ಜಾನಪದ ಪರಿಷತ್ ನೀಡುವ, ನಾಡೋಜ ಎಚ್.ಎಲ್. ನಾಗೇಗೌಡ ರಾಷ್ಟ್ರೀಯ ಪ್ರಶಸ್ತಿಗೆ, ತಮಿಳುನಾಡಿನ ತೆರುಕೂತು, ಜನಪದ ರಂಗಭೂಮಿ ಕಲಾವಿದ, ಟಿ.ಲಕ್ಷ್ಮೀಪತಿ, ಭಾಜನರಾಗಿದ್ದಾರೆ. ಪರಿಷತ್ತಿನ ಅಧ್ಯಕ್ಷ, ಹಿ.ಚಿ.ಬೋರಲಿಂಗಯ್ಯ ಮಾಹಿತಿ ನೀಡಿ, ಇದೇ 17 ರಂದು ಬೆಳಗ್ಗೆ 10.30ಕ್ಕೆ, ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ, ಸಂಸದ ಸಿ.ಎನ್.ಮಂಜುನಾಥ, ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಶ್ರೀ ಆದಿಚುಂಚನಗಿರಿ ಶಾಖಾ ಮಠದ, ಶ್ರೀ ಸೌಮ್ಯನಾಥ ಸ್ವಾಮೀಜಿ, ಸಾನಿಧ್ಯ ವಹಿಸುವರು ಎಂದರು.

<><><>

ಸರ್ದಾರ ವಲ್ಲಭ ಭಾಯಿ ಪಟೇಲ್ ಅವರ, 150ನೇ ಜನ್ಮ ದಿನದ ಅಂಗವಾಗಿ, ಚಿಕ್ಕಮಗಳೂರು ನಗರದ ಶ್ರೀಕಂಠಪ್ಪ ವೃತ್ತದಲ್ಲಿ, ಏಕತಾ ಓಟಕ್ಕೆ, ಉಡುಪಿ-ಚಿಕ್ಕಮಗಳೂರು ಸಂಸದ, ಕೋಟ ಶ್ರೀನಿವಾಸ ಪೂಜಾರಿ, ಚಾಲನೆ ನೀಡಿದರು. ಜನಪ್ರತಿನಿಧಿಗಳು, ಶಾಲಾ ಮಕ್ಕಳು, ಸಾರ್ವಜನಿಕರು ಸೇರಿದಂತೆ, 500ಕ್ಕೂ ಹೆಚ್ಚು ಜನ ಏಕತಾ ಓಟದಲ್ಲಿ, ಪಾಲ್ಗೊಂಡಿದ್ದರು.

<><><>

'ನಿಮ್ಮ ಹಣ, ನಿಮ್ಮ ಅಧಿಕಾರ', ಆಂದೋಲನದೊಂದಿಗೆ, ಕೇಂದ್ರ ಹಣಕಾಸು ಸಚಿವಾಲಯ, ಇಂದು, ಜಿಲ್ಲಾ ಮಟ್ಟದ ಜನ ಜಾಗೃತಿ ಶಿಬಿರಗಳನ್ನು ಆಯೋಜಿಸಿದೆ. ಈ ರಾಷ್ಟ್ರವ್ಯಾಪಿ ಆಂದೋಲನದಲ್ಲಿ, ನಾಗರಿಕರು, ಅವಧಿ ಮೀರಿದ ಈ ವರೆಗೂ ಹಿಂಪಡೆಯಲಾಗದಿದ್ದ, ತಮ್ಮ ಹಣವನ್ನು ಮರಳಿ ಪಡೆಯಬಹುದು. ಬ್ಯಾಂಕಿನ ಮುದ್ದತಿ ಠೇವಣಿಗಳು, ಅವಧಿ ಮುಗಿದ ವಿಮಾ ಕ್ಲೇಮ್‌ಗಳು, ಷೇರುಗಳು ಮತ್ತು ಸಾಲಪತ್ರಗಳ ಸಂಚಿತ ಹಣವನ್ನು, ಕೆ.ವೈ.ಸಿ. ಅಪ್‌ಡೇಟ್ ಮಾಡಿಸಿ, ಸೂಕ್ತ ದಾಖಲೆ ಒದಗಿಸಿ, ಸಾರ್ವಜನಿಕರು, ಹಣಕಾಸು ಸಂಸ್ಥೆಗಳಿಂದ, ಮರಳಿ ಪಡೆಯುವ ಅವಕಾಶ ಕಲ್ಪಿಸಿದೆ.

<><><>

ಬಹುಶ್ರುತ ಇತಿಹಾಸ ತಜ್ಞ, ಸೂರ್ಯನಾಥ ಕಾಮತ ಅವರಿಂದ ಸ್ಥಾಪನೆಗೊಂಡ, ರಾಜ್ಯ ಇತಿಹಾಸ ಅಕಾದೆಮಿ, ಸದ್ಯ ದೇವರಕೊಂಡಾರೆಡ್ಡಿ ಅವರ ನೇತೃತ್ವದಲ್ಲಿ, ಇತಿಹಾಸ ಸಂಶೋಧಕರಿಗೆ, ವೇದಿಕೆ ಒದಗಿಸಿದೆ ಎಂದು, ಇತಿಹಾಸ ಸಂಶೋಧಕ, ಲಕ್ಷ್ಮಣ ತೆಲಗಾವಿ, ಹೇಳಿದ್ದಾರೆ. ಗದಗ ಜಿಲ್ಲೆ, ನಾಗಾವಿಯ, ಮಹಾತ್ಮ ಗಾಂಧಿ ಗ್ರಾಮೀಣಾಭಿವೃದ್ಧಿ ವಿಶ್ವವಿದ್ಯಾಲಯದಲ್ಲಿ ಜರುಗಿದ, ಇತಿಹಾಸ ಅಕಾದೆಮಿಯ, ರಾಷ್ಟ್ರೀಯ ವಾರ್ಷಿಕ ಸಮ್ಮೇಳನದಲ್ಲಿ, ಅವರು ಸಮಾರೋಪ ನುಡಿಗಳನ್ನಾಡಿದರು.

<><><>

ಸ್ವಾತಂತ್ರ್ಯ ಸೇನಾನಿ, ಕ್ರಾಂತಿಕಾರಿ ಧರ್ತಿ ಆಬಾ ಭಗವಾನ್ ಬಿರ್ಸಾ ಮುಂಡಾ ಅವರ 150 ನೇ ಜಯಂತಿ ಹಿನ್ನೆಲೆ, ಜನಜಾತೀಯ ಗೌರವ ದಿವಸ್ ಪಾಕ್ಷಿಕದ ಅಂಗವಾಗಿ, ಚಾಮರಾಜನಗರ ತಾಲೂಕಿನ ರಂಗಸಂದ್ರ ಗ್ರಾಮದ, ಕಿತ್ತೂರು ರಾಣಿ ಚನ್ನಮ್ಮ ವಸತಿ ಶಾಲೆ ಕ್ರೀಡಾಂಗಣದಲ್ಲಿ, ಆದಿವಾಸಿ ಬುಡಕಟ್ಟು ವಸತಿ ಶಾಲೆಗಳ ವಿದ್ಯಾರ್ಥಿಗಳಿಗಾಗಿ ಆಯೋಜಿತ ತಾಲೂಕು ಮಟ್ಟದ ಕ್ರೀಡಾಕೂಟವನ್ನು ಅಪರ ಜಿಲ್ಲಾಧಿಕಾರಿ ಟಿ.ಜವರೇಗೌಡ ಉದ್ಘಾಟಿಸಿದರು. ಆದಿವಾಸಿ ಬುಡಕಟ್ಟು ವಸತಿ ಶಾಲೆಗಳ ವಿದ್ಯಾರ್ಥಿಗಳು ವಾಲಿಬಾಲ್, ಖೋಖೋ, ಕಪ್ಪೆ ಓಟ, ಕಬಡ್ಡಿ ಇನ್ನಿತರ ಕ್ರೀಡಾಕೂಟದಲ್ಲಿ ಭಾಗವಹಿಸಿ, ಸಂಭ್ರಮಿಸಿದರು.

<><><>

ಭಗವಾನ ಶ್ರೀ ಸತ್ಯ ಸಾಯಿ ಬಾಬಾ ರವರ ಜನ್ಮ ಶತಮಾನೋತ್ಸವ ವರ್ಷಾಚರಣೆ ಹಿನ್ನೆಲೆ, ನೈಋತ್ಯ ರೇಲ್ವೆ, ಇಂದಿನಿಂದ, ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಬೆಂಗಳೂರು-ಅಶೋಕಪುರಂ ನಡುವೆ ಕಾಯ್ದಿರಿಸಿದ ವಿಶೇಷ ಮೆಮು ರೈಲು ಸೇವೆಗಳನ್ನು ಆರಂಭಿಸಲಿದೆ. ವಿಶೇಷ ರೈಲು ಸೇವೆ ಶುಕ್ರವಾರ, ಶನಿವಾರ ಹಾಗೂ ಭಾನುವಾರದಂದು ಲಭ್ಯವಿರಲಿದೆ. ಈ ತಿಂಗಳ 21, 22, 23 ಹೊರತುಪಡಿಸಿ, ಡಿಸೆಂಬರ್ 28 ರ ವರೆಗೆ ಈ ಸೇವೆಗಳು ಮುಂದುವರಿಯಲಿವೆ ಎಂದು ನೈಋತ್ಯ ರೇಲ್ವೆ ಅಧಿಕಾರಿಗಳು ತಿಳಿಸಿದ್ದಾರೆ.

<><><>

ಬಳ್ಳಾರಿಯಲ್ಲಿ ಆಯೋಜಿತ, ಐದು ದಿನಗಳ ಅಗ್ನಿವೀರ ನೇಮಕಾತಿ ಪ್ರಕ್ರಿಯೆ ಆರಂಭಗೊಂಡಿದ್ದು, ರಾಜ್ಯದ **14** ಜಿಲ್ಲೆಗಳ ಯುವಕರು ದೈಹಿಕ ಹಾಗೂ ವೈದ್ಯಕೀಯ ಪರೀಕ್ಷೆಯಲ್ಲಿ ಪಾಲ್ಗೊಂಡಿದ್ದಾರೆ. ಬೆಂಗಳೂರು, ಸೇನಾ ನೇಮಕಾತಿ ವಿಭಾಗದ ಅಧಿಕಾರಿ ನಾಯಕ ಕಾರ್ತಿ ಮಾತನಾಡಿ, ನಿನ್ನೆ ನಡೆದ ದೈಹಿಕ ಪರೀಕ್ಷೆಯಲ್ಲಿ **320** ಜನರಲ್ಲಿ **162** ಜನ ತೇರ್ಗಡೆಯಾಗಿದ್ದಾರೆ, ಇಂದು **632** ಜನ ಅಭ್ಯರ್ಥಿಗಳ ದೈಹಿಕ ಪರೀಕ್ಷೆ ನಡೆದಿದೆ ಎಂದರು.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಮಧ್ಯಾಹ್ನ **1** ಗಂಟೆ **10** ನಿಮಿಷಕ್ಕೆ

<><><>